**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 06-03-2017

**ಪಾಟೀಸವಾಲು ಃ ಶ್ರೀ ಎಎಸ್‌ಎನ್‌ಎಚ್ ವಕೀಲರಿಂದ ವಾದಿ ಪರವಾಗಿ,**

**ವಾದಿ** 1(ಎ) **ನನ್ನ ಅಣ್ಣ, ನಾನು ಮುಂಚೆ ಮುಂಬೈನಲ್ಲಿ ವಾಸವಾಗಿದ್ದೆನು. ನನ್ನನ್ನು ಪೋಲೀಸರು ಬಂಧಿಸಿದ ಸಮಯದಲ್ಲಿ ನನ್ನ ಅಣ್ಣ ನನ್ನನ್ನು ಜಾಮೀನಿನ ಮೇಲೆ ಬಿಡಿಸಿದ್ದರು ಎಂದರೆ ಸರಿಯಲ್ಲ, ನಾನು ಒಂದು ಪಾಸ್‌ಪೋರ್ಟನ್ನು ಫೋರ್ಜರಿ ಮಾಡಿ ವಿದೇಶಕ್ಕೆ ಹೋಗಲು ಪ್ರಯತ್ನ ಪಟ್ಟಿರುತ್ತೇನೆ ಎಂದು ಹೇಳಿ ನನ್ನ ಮೇಲೆ ಆರೋಪ ಇತ್ತು ಎಂದರೆ ಸರಿಯಲ್ಲ, ನಾನು ಈ ರೀತಿ ಫೋರ್ಜರಿ ಮಾಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ನನಗೆ ನೆನಪಿರುವುದಿಲ್ಲ. ದಾವಾ ಸ್ವತ್ತು** 4 **ಎಕರೆ ಚಿಲ್ಲರೆ ಇರುತ್ತದೆ. ನಿಖರವಾದ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ಜಾಲಿ ಗ್ರಾಮದಲ್ಲಿ ಇರುತ್ತದೆ. ದಾವಾ ಆಸ್ತಿಯನ್ನು ವಾದಿ** 1(ಎ) **ಮತ್ತು** 2**ನೇ ವಾದಿಗಳು, ಮುಸ್ಬಾ ಹಸನ್ ಸಾಹೇಬ್ ಮತ್ತು ಮುಸ್ಬಾ ಮಮತಾಜ್ ಹುಸೇನ್ ರವರಿಂದ** 15-06-1978 **ರಲ್ಲಿ ನಿಪಿ**-19 **ರ ಪ್ರಕಾರ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ತಾಯಿ ಮಮಜೂನಿ ಮಹ್ಮದ್ ಸಾಹೇಬ್ ಪಿರ್ಜಾದ್ ರವರು ಮೀರಾ ಮೊಹಿದ್ದಿನ್ ಫಿರ್ಜಾದ್ ರವರಿಗೆ ಜಮೀನನ್ನು ಖರೀದಿ ಮಾಡಲು ಹಣ ಕೊಟ್ಟಿರುತ್ತಾರೆ. ಸುಮಾರು** 20 **ಸಾವಿರ ಚಿಲ್ಲರೆ ಹಣಕ್ಕೆ ಖರೀದಿ ಮಾಡಿರಬಹುದು. ಆದರೆ ನಿಖರವಾದ ಹಣ ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ ಮೀರಾ ಮೊಹಿದ್ದಿನ್ ಫಿರ್ಜಾದ್ ರವರಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ನನ್ನ ತಾಯಿ ವಾದಿ** 1(ಎ) **ಮತ್ತು** 2**ನೇ ವಾದಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ, ಅವರ ಸ್ವಂತ ಹಣದಿಂದ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿ** 1(ಎ) **ಮತ್ತು** 2**ನೇ ವಾದಿಯ ಸ್ವಂತ ಆಸ್ತಿ ಎಂದರೆ ಸರಿಯಲ್ಲ.** 15-06-1978 **ರಂದು ಕ್ರಯಕ್ಕೆ ಪಡೆದ ನಂತರ ವಾದಿ** 1(ಎ) **ಮತ್ತು** 2**ನೇ ವಾದಿಗಳು ಸ್ವಂತ ಹಕ್ಕುದಾರಿಕೆಯಲ್ಲಿ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿ** 1(ಎ) **ರವರು ಖರೀದಿ ಮಾಡಿದಾಗಿನಿಂದ ಅದರಲ್ಲಿ ತೆಂಗು, ಮಾವು, ಗೇರು ಮತ್ತು ಇತರೆ ಹಣ್ಣಿನ ಗಿಡಗಳನ್ನು ಸ್ವಂತ ಹಣದಿಂದ ನೆಟ್ಟಿ ಬೆಳೆಸಿದ್ದಾರೆ ಮತ್ತು** 2 **ಬಾವಿಯನ್ನು ತೋಡಿಸಿ,** 2 **ಬಾವಿ ಗಳಿಗೆ** 2 **ಪಂಪಸೆಟ್ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಫಾರ್ಮ್ ಹೌಸ್, ಒಂದು ಅರ್ಧ ಕಟ್ಟಿದ ಮನೆಯನ್ನು ವಾದಿ** 1(ಎ) **ನವರು ಸ್ವಂತ ಹಣದಿಂದ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿಯು ಅಣ್ಣ ತಮ್ಮಂದಿರೆಲ್ಲರೂ ಸೇರಿ ಹೊಟೆಲ್‌ದಿಂದ ಬಂದಂತಹ ಹಣದಿಂದ ಕಟ್ಟಿಸಿರುವುದಾಗಿ ಹೇಳಿರುತ್ತಾರೆ. ವಾದಿ** 1(ಎ) **ರವರನ್ನು ಹೊರತುಪಡಿಸಿ ಬೇರೆ ಯಾರೂ ದಾವಾ ಸ್ವತ್ತಿನಲ್ಲಿ ಮೇಲೆ ಹೇಳಿದ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಮರಗಳ ಉತ್ಪನ್ನವನ್ನು ವಾದಿ** 1(ಎ) **ನವರೇ ಪಡೆಯುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.** 1(ಎ) **ರವರು ದಾವಾ ಸ್ವತ್ತಿನಲ್ಲಿ ಪ್ರಾಥಮಿಕ ಕೃಷಿ ಅಭಿವೃದ್ಧಿ ಸಂಘದಿಂದ ಸಾಲವನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸಾಲವನ್ನು ಪಡೆದಿರುವುದು ನಿಜವಿರುತ್ತದೆ. ಆದರೆ ಅಣ್ಣ ತಮ್ಮಂದಿರೆಲ್ಲರೂ ಒಟ್ಟಾಗಿ ಸಾಲ ಮರುಪಾವತಿ ಮಾಡಿರುವುದಾಗಿ ಹೇಳಿರುತ್ತಾರೆ. ಅಣ್ಣ ತಮ್ಮಂದಿರು ಒಟ್ಟಾಗಿ**

ಸೇರಿ ಸಾಲ ಮರುಪಾವತಿ ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ನಾವು ಅಣ್ಣ ತಮ್ಮಂದಿರು ಯಾರೂ ಸಾಲ ಮರುಪಾವತಿ ಮಾಡಲು ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿ 1(ಎ) ರವರು ದಾವಾ ಆಸ್ತಿಯಲ್ಲಿನ ಅರ್ಧ ಅಂಶದ ಆಸ್ತಿಯನ್ನು ವಾದಿಗಳಾದಂತಹ 1 ಮತ್ತು 3 ರಿಂದ 6 ರವರಿಗೆ ರೂ. 1,78,000-00 ಕ್ಕೆ ನಿಪಿ-20 ರ ಪ್ರಕಾರ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ಣ ಹಕ್ಕು ಮತ್ತು ಸ್ವಾದೀನ ನಿಪಿ-20 ರಲ್ಲಿ ಹೇಳಿರುವ ದಿನಾಂಕದಂದು 1ನೇ ವಾದಿ ಬಿಬಿ ಆಯಿಶಾ ಮತ್ತು 2 ರಿಂದ 6ನೇ ವಾದಿಗಳ ಹಕ್ಕಿಗೆ ಒಳಪಟ್ಟಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ದಾಖಲಾದ ನಂತರ 1ನೇ ವಾದಿ ಬಿಬಿ ಆಯಿಶಾ ತೀರಿಕೊಂಡಿರುತ್ತಾರೆ ಎಂದರೆ ಸರಿ. 1ನೇ ವಾದಿ ಬಿಬಿ ಆಯಿಶಾ ತೀರಿಕೊಂಡ ನಂತರ ಆಕೆಯ ವಾರಸದಾರರಾದ 1(ಎ) ಮತ್ತು ಇತರೆ ವಾದಿಗಳಿಗೆ ದಾವಾ ಸ್ವತ್ತು ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ದಾವಾ ಸ್ಥಳದ ಸುತ್ತ ಗುಂಡುಕಲ್ಲಿನಿಂದ ಕಟ್ಟಿದ ಮಣ್ಣಿನ ಪಾಗಾರ ಇತ್ತು ಎಂದರೆ ಸರಿ. ನನ್ನ ಅಣ್ಣ 1(ಎ) ರವರು ದಾವಾ ಸ್ವತ್ತಿನ ಮುಂಭಾಗದ ಎದುರಿನ ಮಣ್ಣಿನಿಂದ ಕಟ್ಟಿದ ಪಾಗಾರವನ್ನು ಕಿತ್ತು ಹಾಕಿ ಕೆಂಪು ಕಲ್ಲಿನ ಪಾಗಾರವನ್ನು ಹಾಕಿ ಒಂದು ಕಬ್ಬಿಣದ ಗೇಟನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾವೆಲ್ಲರೂ ಬಾಂಬೆಯಲ್ಲಿ ಹೊಟೆಲ್‌ನಲ್ಲಿ ಸಂಪಾದಿಸಿದ ಹಣದಿಂದ ಆ ರೀತಿ ಕಂಪೌಂಡ್ ಹಾಕಿರುತ್ತಾರೆ ಎಂದು ಹೇಳಿರುತ್ತಾರೆ. ನಾವೆಲ್ಲರೂ ಒಟ್ಟಾಗಿ ನನ್ನ ಅಣ್ಣನಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಇಡೀ ಕಂಪೌಂಡ್‌ನಲ್ಲಿರುವ ಸ್ವತ್ತು ವಾದಿಗಳ ಸ್ವಾದೀನದಲ್ಲಿರುತ್ತದೆ ಎಂದರೆ ಸರಿಯಲ್ಲ.

2014 ಅಕ್ಟೋಬರ್ 1ನೇ ವಾರ 1ನೇ ಪ್ರತಿವಾದಿ ದಾವಾ ಸ್ವತ್ತನ್ನು ಆಕ್ರಮಣ ಮಾಡಲು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮಾಸ್ತಿ ನಾಯ್ಕ ಎನ್ನುವವರು ದಾವಾ ಸ್ವತ್ತಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಆ ರೀತಿ ದಾವಾ ಸ್ವತ್ತನ್ನು ಒತ್ತುವರಿ ಮಾಡುತ್ತಾರೆ ಎಂದು ಗೊತ್ತಾದ ಸಮಯದಲ್ಲಿ ವಿಚಾರಣೆ ಮಾಡಿದಾಗ ವಾದಿಗಳಿಗೆ ದಾವಾ ಸ್ವತ್ತಿನ ಆರ್‌ಟಿಸಿಗಳು 1ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗಳಿಗೆ ಗೊತ್ತಾಗದ ಹಾಗೆ 1ನೇ ಪ್ರತಿವಾದಿ ಗೌಪ್ಯವಾಗಿ ಮತ್ತು ಅಕ್ರಮವಾಗಿ ಆರ್‌ಟಿಸಿ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 03-11-2014 ರಂದು ವಾದಿಗಳು ಆರ್‌ಟಿಸಿಯನ್ನು ಪಡೆದುಕೊಳ್ಳಲು ವ್ಯವಸ್ಥೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 2014 ನವೆಂಬರ್ ಮಧ್ಯಭಾಗದಲ್ಲಿ ಆರ್‌ಟಿಸಿಗಳು ಬದಲಾವಣೆಯಾದ ವಿಚಾರ ವಾದಿಗಳ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಹೆಸರಿಗೆ ಆರ್‌ಟಿಸಿ ಬದಲಾವಣೆಯಾಗುವ ಪೂರ್ವದಲ್ಲಿ ನನ್ನ ತಾಯಿಯಾದ ಮಾಮಾಜುನಿ ಅವರ ಹೆಸರಿಗೆ ಗುಟ್ಟಿನಲ್ಲಿ ಮತ್ತು ಅಕ್ರಮವಾಗಿ ಆರ್‌ಟಿಸಿ ಬದಲಾವಣೆ ಮಾಡಿಕೊಂಡ ವಿಚಾರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಮತ್ತು ಮಾಮಾಜುನಿ ರವರ ಹೆಸರಿಗೆ ಫೋರ್ಜರಿ ಮತ್ತು ಅಕ್ರಮ ದಾಖಲೆಗಳ ಆಧಾರದ ಮೇಲೆ ಆರ್‌ಟಿಸಿ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಫೋರ್ಜರಿ ಮತ್ತು ಅಕ್ರಮ ಮಾಡಿ ಆರ್‌ಟಿಸಿಗಳನ್ನು ನನ್ನ ಚಿತಾವಣೆ ಮತ್ತು

ಒಳಸಂಚಿನ ಮೇರೆಗೆ ಆಗಿರುತ್ತದೆ ಎಂದರೆ ಸರಿಯಲ್ಲ. 2 ರಿಂದ 10 ನೇ ಪ್ರತಿವಾದಿಗಳು ಎಲ್ಲರೂ ಸಹೋದರ-ಸಹೋದರಿಯರಾಗಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತನ್ನು ಅಕ್ರಮವಾಗಿ ಒಡೆಯುವ ಸಲುವಾಗಿ ನಾವೆಲ್ಲರೂ ಸೇರಿ ಒಳಸಂಚು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಲು ಪ್ರಧಾನ ಸಂಚುಗಾರ ನಾನೇ ಎಂದರೆ ಸರಿಯಲ್ಲ.

ದಿನಾಂಕ 20-09-2012 ರಂದು ವಾದಿ 1(ಎ) ರವರು ಬಾಂಬೆಯಲ್ಲಿ ಇದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ವಾದಿ 1(ಎ) ನವರು ಬಂದು ಹೋಗಿ ಮಾಡುತ್ತಿದ್ದರು ಎಂದು ಹೇಳಿರುತ್ತಾರೆ. ವಾದಿ 1(ಎ) ರವರು ನನ್ನ ತಾಯಿಯಾದ ಮಾಮಾಜುನಿಯವರಿಗೆ ದಾನಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಫೋರ್ಜರಿ ದಾಖಲೆಯನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೆ.ಎಸ್. ರೈ ಎನ್ನುವ ನೋಟರಿಯವರು ಇದ್ದಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನಾನು ಕೆ.ಎಸ್. ರೈ ರವರನ್ನು ಕರೆದುಕೊಂಡು ಒಳಸಂಚು ಮುಖಾಂತರ ದಾನಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾನ ಪತ್ರ ಕಾನೂನು ಪ್ರಕಾರ ಸಿಂಧು ಆಗಿರುವುದಿಲ್ಲ ಮತ್ತು ಜಾರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾನ ಪತ್ರದ ಮುಖಾಂತರ ಮಾಮಾಜುನಿ ರವರಿಗೆ ಯಾವ ಹಕ್ಕು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾನ ಪತ್ರದ ಆಧಾರ ಮೇರೆಗೆ ಮಾಮಾಜುನಿಯವರಿಗೆ ಸ್ವಾದೀನ ಬಂದಿರುತ್ತದೆ. ಮಾಮಾಜುನಿರವರಿಗೆ ದಾನ ಪತ್ರದ ವಿಚಾರ ಗೊತ್ತಿರುವುದಿಲ್ಲ ಮತ್ತು ಅವರು ಹಾಸಿಗೆಯ ಮೇಲೆ ಮಲಗಿದ್ದರು ಮತ್ತು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮಾಮಾಜುನಿ ರವರ ಎಡಭಾಗದ ಕೈ ಮತ್ತು ಕಾಲಿಗೆ ಪಾರ್ಶ್ವವಾಯು ಆಗಿತ್ತು ಮತ್ತು ಅವರು ಹಾಸಿಗೆ ಮೇಲೆ ಮಲಗಿದ್ದರು. ದಾನ ಪತ್ರವಾಗುವ ಸಮಯದಲ್ಲಿ ನನ್ನ ತಾಯಿಗೆ ಪಾರ್ಶ್ವವಾಯು ಆಗಿತ್ತು. ಸಾಕ್ಷಿಯು ಪುನಃ ನುಡಿಯುತ್ತಾರೆ. ದಾನ ಪತ್ರ ಆದ ನಂತರ ಪಾರ್ಶ್ವವಾಯು ಆಗಿರುತ್ತದೆ. ನನ್ನ ತಾಯಿ ಮುಂಚೆಯಿಂದಲೂ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು ಎಂದು ಹೇಳುತ್ತಾರೆ. ದಿನಾಂಕ 20-09-2012 ರ ದಾನ ಪತ್ರದಲ್ಲಿ ಇರುವ ಸಹಿಗಳು ಮತ್ತು ಹೆಬ್ಬೆಟ್ಟುಗಳೆಲ್ಲವೂ ಫೋರ್ಜರಿ ಮಾಡಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಾನೇ ಸದ್ರಿ ದಾನ ಪತ್ರದ ಆಧಾರದ ಮೇರೆಗೆ ಮ್ಯುಟೇಶನ್ ಬದಲಾವಣೆಗೆ ಫೋರ್ಜರಿ ಮುಖಾಂತರ ಅರ್ಜಿ ಹಾಕಿಸಿರುತ್ತೇನೆ ಎಂದರೆಸರಿಯಲ್ಲ. ವಾದಿಗಳಿಗೆ ಯಾವುದೇ ನೋಟೀಸು ಕೊಡದೇ ಒಳಸಂಚು ಮುಖಾಂತರ ಎಂಆರ್ಎಚ್ 24 ರ ಆದೇಶದಂತೆ ಮ್ಯುಟೇಶನ್ ಬದಲಾವಣೆಯನ್ನು ನನ್ನ ತಾಯಿ ಹೆಸರಿಗೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಆ ರೀತಿ ದಾನಪತ್ರ ಮಾಡಿಕೊಡುವ ಅಗತ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ನನ್ನ ತಾಯಿಗೆ ಯಾವುದೇ ಹಕ್ಕು ಮತ್ತು ಸ್ವಾದೀನತೆಯನ್ನು ಬಿಟ್ಟುಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಮಾಮಾಜುನಿ ರವರ ಹೆಸರಿನಲ್ಲಿ ದಿನಾಂಕ 27-12-2013 ರಂದು ಒಂದು ಪ್ರಮಾಣಪತ್ರವನ್ನು ಸಹ ಫೋರ್ಜರಿಯಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನೋಟರಿಯವರಾದಂತಹ ಕೆ. ಎಸ್. ರೈ ರವರನ್ನು ಒಳಸಂಚಾಗಿ ಪಡೆದುಕೊಂಡು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ 02-10-2012 ರಲ್ಲಿ ನನ್ನ ತಾಯಿ ಮಾಮಾಜುನಿ ಹೆಸರಿಗೆ ಮತ್ತೊಂದು ದಾನಪತ್ರ ಆಗಿರುವುದಿಲ್ಲ. ಮೃತ 1ನೇ ವಾದಿ ಮತ್ತು 3 ರಿಂದ 6ನೇ ವಾದಿಯ ಹೆಸರಿನಲ್ಲಿ ಒಂದು ದಾನಪತ್ರವನ್ನು ದಿನಾಂಕ 02-10-2012 ರಂದು ಸೃಷ್ಟಿ ಮಾಡಿ ನನ್ನ ತಾಯಿ ಹೆಸರಿಗೆ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ದಾಖಲೆಯನ್ನು ಮಾಡುವಾಗಲೂ ಸಹ ಕೆ. ಎಸ್. ರೈರವರು ಒಳಸಂಚಿಗೆ ಸೇರಿರುತ್ತಾರೆ ಎಂದರೆ ಸರಿಯಲ್ಲ. ನಾನೇ ದಿನಾಂಕ 02-10-2012 ರ ದಾನಪತ್ರಕ್ಕೆ ಮೃತ 1ನೇ ವಾದಿ ಮತ್ತು 3 ರಿಂದ 6ನೇ ವಾದಿಗಳ ಸಹಿ ಮತ್ತು ಹೆಬ್ಬೆಟ್ಟು ಗುರುತನ್ನು ಫೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 4 ಮತ್ತು 5ನೇ ಪ್ರತಿವಾದಿ ಹಾಗೂ ಇರ್ಶಾದ್ ಅಹ್ಮದ್ ಎನ್ನುವವರೂ ಸಹ 2-10-2012 ರ ದಾನ ಪತ್ರ ಮಾಡಲು ಒಳಸಂಚುದಾರರಾಗಿ ಸೇರಿರುತ್ತಾರೆ ಎಂದರೆ ಸರಿಯಲ್ಲ. ಇರ್ಶಾದ್ ಅಹ್ಮದ್ 4ನೇ ಪ್ರತಿವಾದಿ ರವರ ಮಗ ಎಂದರೆ ಸರಿ. ಈ ಹಿಂದೆ ಹೇಳಿದ ಎಲ್ಲಾ ದಾಖಲೆಗಳನ್ನು ದಾವಾ ಸ್ವತ್ತನ್ನು ಒಡೆಯುವ ಉದ್ದೇಶದಿಂದ ಫೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2ನೇ ವಾದಿ ನನ್ನ ಅಣ್ಣನ ಮಗ. 2ನೇ ವಾದಿ ಬಾಂಬೆಯಲ್ಲಿ ಇರುತ್ತಾರೆ. 2ನೇ ವಾದಿ ಯಾವುದೇ ದಾನಪತ್ರವನ್ನು ಬರೆದುಕೊಟ್ಟಿರುವುದಿಲ್ಲ. 20-09-2012 ರಂದು 2ನೇ ವಾದಿ ಬಾಂಬೆಯಲ್ಲಿ ಇದ್ದರು. ಸಾಕ್ಷಿಯು ಮುಂದುವರಿದು 2ನೇ ವಾದಿಯು ನಮ್ಮ ಜಮಾತಿನಲ್ಲಿ ಆದಂತಹ ನಿರ್ಣಯದಂತೆ ಅವರ ಪಾಲಿಗೆ ಬಂದಂತಹ ಆಸ್ತಿಯನ್ನು ನಮಗೆ ಕೊಟ್ಟು ಹೋಗಿರುತ್ತಾರೆ, ಆದರೆ ಯಾವುದೇ ದಾನಪತ್ರವನ್ನು ಬರೆದಿರುವುದಿಲ್ಲ. ಜಮಾತಿನಲ್ಲಿ ಆದಂತಹ ನಿರ್ಣಯದಂತೆ 2ನೇ ವಾದಿಯು ನನ್ನ ತಾಯಿ ಹೆಸರಿಗೆ ಆರ್‌ಟಿಸಿಯನ್ನು ಮಾಡಿಕೊಟ್ಟಿರುತ್ತಾರೆ. ಆದರೆ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ಜಮಾತಿನಲ್ಲಿ ಯಾವುದೇ ಪಂಚಾಯತಿ ಅಥವಾ ನಿರ್ಣಯ ಆಗಿರುವುದಿಲ್ಲ ಎಂದರೆ ಸರಿಯಲ್ಲ, ನನ್ನ ಅಣ್ಣ 1(ಎ) ರವರಿಗೆ ಬಿಟ್ಟು ಉಳಿದ ವಾದಿಗಳಿಗೆ ಉರ್ದು ಓದಲು, ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಲ್ಲಿ 1(ಎ) ಯನ್ನು ಹೊರತುಪಡಿಸಿ ಉಳಿದ ವಾದಿಯರು ಉರ್ದು ಭಾಷೆಯಲ್ಲಿ ಸಹಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ದಾನಪತ್ರಗಳಲ್ಲಿ ಇರುವಂತಹ ಯಾವುದೇ ಸಹಿಗಳು ವಾದಿಗಳಿಗೆ ಸೇರಿದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮಾಮಾಜುನಿ ರವರಿಗೆ 3 ರಿಂದ 6ನೇ ವಾದಿಗಳು ಯಾವ ದಿನಾಂಕದಂದು ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾನಪತ್ರಗಳನ್ನು ಛಾಪಾ ಕಾಗದದಲ್ಲಿ ಬರೆದಿರುತ್ತಾರೋ ಅಥವಾ ಬೇರೆ ಯಾವುದೇ ಕಾಗದದಲ್ಲಿ ಬರೆದಿರುತ್ತಾರೋ ನನಗೆ ಗೊತ್ತಿರುವುದಿಲ್ಲ. ಏಕೆಂದರೆ ನನ್ನ ತಾಯಿಗೆ ಬರೆದುಕೊಟ್ಟಿರುತ್ತಾರೆ ಮತ್ತು ನಾನು ಆ ಸಮಯದಲ್ಲಿ ಇರಲಿಲ್ಲ. ದಾನಪತ್ರಗಳಿಗೆ ಯಾರು ಸಾಕ್ಷಿದಾರರಾಗಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರಿದು ದಾನಪತ್ರಕ್ಕೆ ರಿಜ್ವಾನ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ರಿಜ್ವಾನ್ ರವರು ನಮ್ಮ ಬೀದಿಯವರಾಗಿದ್ದು ಪರಿಚಯವಿರುತ್ತಾರೆ. ಆದರೆ ನನ್ನ ಸ್ನೇಹಿತರಲ್ಲ. 3 ರಿಂದ 6 ನೇ ವಾದಿಗಳು ಮತ್ತು ಮೃತ 1ನೇ ವಾದಿ ಮುಂಬೈನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 5ನೇ ವಾದಿ ಗರ್ಭಿಣಿಯಾದಂತಹ ವಿಚಾರ ನನಗೆ ಗೊತ್ತಿರುವುದಿಲ್ಲ. ದಿನಾಂಕ 02-10-2012 ರಂದು 5ನೇ ವಾದಿ ಗರ್ಭಿಣಿಯಾಗಿದ್ದರಿಂದ ವೈದ್ಯರ ಬಳಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 3, 4 ಮತ್ತು 6ನೇ ವಾದಿಗಳು ಮುಂಬೈನಲ್ಲಿ ಬೇರೆ ಬೇರೆ ಕೆಲಸದಲ್ಲಿ

ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ರಿಂದ 6ನೇ ವಾದಿಗಳು ಮುಂಬೈನಿಂದ ಭಟ್ಕಳಕ್ಕೆ ಮತ್ತು ಜಾಲಿ ಗ್ರಾಮಕ್ಕೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

ಬಾವಾ ಅಮೀರ್ ಬಂಟವಾಳ 1ನೇ ಪ್ರತಿವಾದಿಗೆ ನಾವೆಲ್ಲರೂ ಸೇರಿ 31-05-2014 ರಲ್ಲಿ ಒಂದು ಸುಳ್ಳು ಕ್ರಯದಸ್ತವೇಜನ್ನು ತೋರಿಕೆ ಮಟ್ಟಿಗೆ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ 2 ರಿಂದ 10 ನೇ ಪ್ರತಿವಾದಿಗಳು ದಿನಾಂಕ 31-05-2014 ರ ಕ್ರಯಪತ್ರವನ್ನು ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಸ್ವಾಧೀನದಲ್ಲಿ ದಾವಾ ಸ್ವತ್ತು ಇಲ್ಲದೇ ಇರುವುದರಿಂದ 1ನೇ ಪ್ರತಿವಾದಿಗೆ ನಮಗೆ ಸ್ವಾಧೀನ ಕೊಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ದಿನಾಂಕ ನನಗೆ ಗೊತ್ತಿರುವುದಿಲ್ಲ. 17 ಲಕ್ಷ 52 ಸಾವಿರ ರೂಪಾಯಿಗಳಿಗೆ 1ನೇ ಪ್ರತಿವಾದಿ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಟ್ಟಿರಬಹುದು. ದಿನಾಂಕ 31-05-2014 ರ ಕ್ರಯ ಪತ್ರವನ್ನು ಬರೆದುಕೊಡುವ ಸಮಯದಲ್ಲಿ 2 ರಿಂದ 10 ನೇ ಪ್ರತಿವಾದಿಗಳೆಲ್ಲರೂ ಸ್ವತಹ ಹಾಜರಿದ್ದು ಸಹಿ ಮಾಡಿರುತ್ತಾರೆ. ಕ್ರಯಪತ್ರವನ್ನು ಯಾರ ಬಳಿ ಬರೆಸಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ. ಕ್ರಯಪತ್ರವನ್ನು ಯಾರು ಬರೆದಿದ್ದರು ಎಂದು ನನಗೆ ನೆನಪಿರುವುದಿಲ್ಲ. ಕ್ರಯಪತ್ರವನ್ನು ನೋಂದಣಿ ಕಚೇರಿಯ ಒಳಗಡೆ ಅಥವಾ ಹೊರಗಡೆ ಬರೆದಿರುತ್ತಾರೆಯೋ ಎಂದು ಹೇಳಲು ನನಗೆ ಈಗ ನೆನಪಿರುವುದಿಲ್ಲ. ಕ್ರಯ ಪತ್ರ ಆದ ನಂತರ ಹಣವನ್ನು ಕೊಟ್ಟಿರುತ್ತಾರೆ. ಉಪನೊಂದಣಾಧಿಕಾರಿಗಳ ಮುಂಭಾಗ ಹಣವನ್ನು ಪಡೆದಿರುತ್ತೇವೋ ಇಲ್ಲವೋ ನನಗೆ ನೆನಪಿರುವುದಿಲ್ಲ. 17 ಲಕ್ಷದ 52 ಸಾವಿರ ರೂಪಾಯಿಗಳನ್ನು ಸಂಪೂರ್ಣ ನಗದು ರೂಪದಲ್ಲಿ 1ನೇ ಪ್ರತಿವಾದಿ ನನಗೆ ಕೊಟ್ಟಿರುತ್ತಾರೆ. ಸಾಕ್ಷಿಯು ಪುನಃ ಹೇಳುತ್ತಾರೆ 1ನೇ ಪ್ರತಿವಾದಿ 3 ಚೆಕ್‌ಗಳನ್ನು ಕೊಟ್ಟಿರುತ್ತಾರೆ. ಉಳಿದ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಎಷ್ಟು ಹಣ ನಗದು ರೂಪದಲ್ಲಿ ಮತ್ತು ಚೆಕ್ಕಿನ ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಹಣವನ್ನು 1000 ಮತ್ತು 500 ಮುಖಬೆಲೆಯಲ್ಲಿ ಕೊಟ್ಟಿರುತ್ತಾರೆ. ಚೆಕ್ಕುಗಳನ್ನು ನನ್ನ ಹೆಸರಿನಲ್ಲಿ 1ನೇ ಪ್ರತಿವಾದಿ ಕೊಟ್ಟಿರುತ್ತಾರೆ. ಯಾವ ಬ್ಯಾಂಕ್ ಮತ್ತು ಯಾವ ದಿನಾಂಕದ ಚೆಕ್ ಎಂದು ನನಗೆ ಗೊತ್ತಿರುವುದಿಲ್ಲ. 1ನೇ ಪ್ರತಿವಾದಿಯು ತನ್ನ ಸ್ವಂತ ಬ್ಯಾಂಕ್ ಖಾತೆಗೆ ಸೇರಿದ ಚೆಕ್ಕುಗಳನ್ನು ಕೊಟ್ಟಿರುತ್ತಾರೆ. ನನಗೆ ಕೊಟ್ಟಂತಹ ಚೆಕ್ಕುಗಳು ಒಂದೇ ಬ್ಯಾಂಕಿನದೇ ಅಥವಾ ಬೇರೆ ಬ್ಯಾಂಕಿನ ಚೆಕ್ಕುಗಳೇ ಎಂದು ನೆನಪಿರುವುದಿಲ್ಲ. 1ನೇ ಪ್ರತಿವಾದಿಗೆ ಅಷ್ಟೊಂದು ಹಣ ಎಲ್ಲಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಚೆಕ್ಕುಗಳನ್ನು ಎಷ್ಟು ದಿನಗಳ ನಂತರ ನಗದೀಕರಣ ಮಾಡಿರುತ್ತೇನೆ ಎಂದು ಈಗ ಹೇಳಲು ನನಗೆ ನೆನಪಿರುವುದಿಲ್ಲ. ಯಾರ್‍ಯಾರಿಗೆ ಎಷ್ಟೆಷ್ಟು ಹಣವನ್ನು ಹಂಚಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಯಾವಾಗ ನಾನು ಹಣವನ್ನು 2 ರಿಂದ 10 ನೇ ಪ್ರತಿವಾದಿಗಳಿಗೆ ಕೊಟ್ಟಿರುತ್ತೇನೆ ಎಂದು ಈಗ ನನಗೆ ನೆನಪಿರುವುದಿಲ್ಲ. ನಗದು ರೂಪದ ಹಣವನ್ನು ನನ್ನ ಕೈಯ್ಯಲ್ಲಿ ಕೊಟ್ಟಿರುತ್ತಾರೆ. ಸದ್ರಿ ನಗದು ರೂಪದ ಹಣವನ್ನು ಯಾವಾಗ ಉಳಿದ ಪ್ರತಿವಾದಿಗಳಿಗೆ ಹಂಚಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು ಉಳಿದ ಪ್ರತಿವಾದಿಗಳಿಗೆ ಹಣವನ್ನು ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಹಾಗೆ ಹಣವನ್ನು ಕೊಟ್ಟಿರುತ್ತೇನೆ. ಕ್ರಯಪತ್ರಕ್ಕೆ ಸುಮಾರು 1 ಲಕ್ಷ ಚಿಲ್ಲರೆಯಷ್ಟು ಹಣದ ಸ್ಟಾಂಪ್ ಡ್ಯೂಟಿಯನ್ನು ಕಟ್ಟಿರುತ್ತೇನೆ. ಸ್ಟಾಂಪ್ ಪೇಪರನ್ನು ಯಾರು

ತಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ನನ್ನ ತಮ್ಮನಿಗೆ ಗೊತ್ತಿರುತ್ತದೆ. ಸ್ಟಾಂಪ್ ಪೇಪರನ್ನು ಯಾರ ಹೆಸರಿನಲ್ಲಿ ಮತ್ತು ಎಲ್ಲಿಂದ ತಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಉಪನೋಂದಣಿ ಕಚೇರಿಯಲ್ಲಿ ನಮ್ಮಗಳ ಹೆಬ್ಬಟ್ಟು ಗುರುತನ್ನು ಮಾತ್ರ ತೆಗೆದುಕೊಂಡಿರುತ್ತಾರೋ ಅಥವಾ ಸಹಿಗಳನ್ನು ಮಾತ್ರ ತೆಗೆದುಕೊಂಡಿರುತ್ತಾರೋ ನನಗೆ ಈಗ ಹೇಳಲು ನೆನಪಿಲ್ಲ. ಉಪನೋಂದಣಾಧಿಕಾರಿಗಳು ನಮ್ಮೆಲ್ಲರನ್ನೂ ಕರೆದು ಕ್ರಯಪತ್ರವನ್ನು ಬರೆದುಕೊಡಲು ಒಪ್ಪಿರುತ್ತೀರಾ ಎಂದು ಕೇಳಿದ ಸಮಯದಲ್ಲಿ ನಾವೆಲ್ಲರೂ ಕ್ರಯಪತ್ರವನ್ನು ಬರೆದುಕೊಡಲು ಒಪ್ಪಿರುವುದಾಗಿ ಹೇಳಿರುತ್ತೇವೆ. ಕ್ರಯಪತ್ರ ನೋಂದಣಿಯಾಗುವ ಸಮಯದಲ್ಲಿ ಪ್ರತಿವಾದಿ 2 ರಿಂದ 10 ರವರ ಸಹಿ ಮತ್ತು ಹೆಬ್ಬಟ್ಟಿನ ಗುರುತನ್ನು ತೆಗೆದುಕೊಂಡಿರುತ್ತಾರೆ. ಕ್ರಯಪತ್ರಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಕ್ರಯಪತ್ರಕ್ಕೆ ಎಷ್ಟು ಜನ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ಹೇಳಲು ನನಗೆ ಈಗ ನೆನಪಿರುವುದಿಲ್ಲ. ಸಾಕ್ಷಿದಾರರೆಲ್ಲರೂ ಭಟ್ಕಳದವರಾಗಿರುತ್ತಾರೆ ಆದರೆ ಅವರ ಹೆಸರು ಮತ್ತು ತಂದೆಯ ಹೆಸರು ಗೊತ್ತಿರುವುದಿಲ್ಲ. 1ನೇ ಪ್ರತಿವಾದಿ ನನ್ನ ಸ್ನೇಹಿತ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ಜೊತೆ ಶಾಮೀಲಾಗಿ ಇಂತಹದೇ ಅಕ್ರಮ ದಾಖಲೆಗಳನ್ನು ಮಾಡುವ ಪ್ರವೃತ್ತಿಯನ್ನು ಹೊಂದಿರುವವನು ಎಂದರೆ ಸರಿಯಲ್ಲ. ನಾನು, 1ನೇ ಪ್ರತಿವಾದಿ ಹಾಗೂ ಸಾಕ್ಷಿದಾರರು ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸೃಷ್ಟಿತ ಕ್ರಯಪತ್ರವನ್ನು ಬರೆದುಕೊಡುವವರಿಗೆ ಎಂದೂ ಹಕ್ಕು ಮತ್ತು ಸ್ವಾದೀನ ಹಾಗೂ ಕ್ರಯಪತ್ರ ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಹಾಗಾಗಿ 1ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಹಕ್ಕು ಮತ್ತು ಸ್ವಾದೀನ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಕ್ರಯಪತ್ರ ಅಸಿಂಧು ದಾಖಲೆಯಾಗಿದೆ ಎಂದರೆ ಸರಿಯಲ್ಲ.

2ನೇ ವಾದಿ ನಮ್ಮ ಊರಿಗೆ ಬಂದಾಗ ದಾವಾ ಸ್ವತ್ತನ್ನು ಬಿಟ್ಟುಕೊಡದೇ ಇದ್ದರೆ ಹೊಡೆಯುತ್ತೇವೆ, ಬಡಿಯುತ್ತೇವೆ ಎಂದು ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. 2 ಮತ್ತು 4ನೇ ವಾದಿಗಳು ನನ್ನ ಮತ್ತು ಇತರರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಮೂಲ ದಾಖಲೆಗಳೆಲ್ಲವೂ ಈಗ ಎಲ್ಲಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲೀಸ್‌ನವರು ವಿಧಿ ವಿಜ್ಞಾನ ಇಲಾಖೆಗೆ ಕಳುಹಿಸಿರುವ 6 ದಾಖಲೆಗಳನ್ನು ಅಲ್ಲಿಂದ ವಾಪಸ್ಸು ಬರದ ಹಾಗೆ ನಾನು ತಡೆಹಿಡಿದಿದ್ದೇನೆ ಎಂದರೆ ಸರಿಯಲ್ಲ. ಆ ದಾಖಲೆಗಳು ಇಲ್ಲಿಗೆ ಬಂದರೆ ಅವು ಅಕ್ರಮ ಮತ್ತು ಫೋರ್ಜರಿ ಎಂದು ಗೊತ್ತಾಗುತ್ತದೆ ಎಂದು ತಡೆಹಿಡಿದಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮೇಲೆ 4 ಕ್ರಿಮಿನಲ್ ಕೇಸನ್ನು ಹಾಕಿರುತ್ತಾರೆ ಎಂದರೆ ಸರಿ. ಈ ದಾಖಲೆಗಳನ್ನು ಮೋಸ ಮತ್ತು ವಂಚನೆ ಹಾಗೂ ಫೋರ್ಜರಿ ಮಾಡಿದ್ದಾರೆಂದು ಹೇಳಿ ನಮ್ಮ ಮೇಲೆ 4 ಕ್ರಿಮಿನಲ್ ಪ್ರಕರಣ ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾವು ಫೋರ್ಜರಿ ಮಾಡಿರುವುದಿಲ್ಲ, ಆದರೆ 4 ಕೇಸು ದಾಖಲು ಮಾಡಿರುತ್ತಾರೆ. ಮಾಮಾಜುನಿಯವರು ಯಾವುದೇ ದಾಖಲೆಗಳನ್ನು ಬರೆದುಕೊಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮಾಮಾಜುನಿಯವರ ಹೆಸರಿನಲ್ಲಿ ದಾಖಲೆಗಳನ್ನು ನಾನೇ ಫೋರ್ಜರಿ ಮಾಡಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ ದಾಖಲೆಗಳು ಮತ್ತು ಜಾಗವಲ್ಲದೇ ವಾದಿಗಳಿಗೆ ಸೇರಿದ ಬೇರೆ ಜಾಗವನ್ನು ಮೋಸದ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಬಗ್ಗೆ 5 ಸಿವಿಲ್ ದಾವೆಗಳನ್ನು ವಾದಿಗಳು ನಮ್ಮ ಮೇಲೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ಆಸ್ತಿಯನ್ನು ಹೊಡೆದುಕೊಳ್ಳುವ ಸಲುವಾಗಿ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆ. ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.
ಸಹಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಭಟ್ಕಳ